# ದರ್ಶನ್ ಕಷ್ಟದ ದಿನಗಳ ಮೆಲುಕು

■ ವಿಶಾಖ ಎನ್.

'ಮುಝೆ ಕುಚ್ ಕೆಹ್ನಾ ಹೈ' ಸಿನಿಮಾದಲ್ಲಿ ಸಣ್ಣ ಪಾತ್ರದ ಮೂಲಕ ಹಿಂದಿ ಚಿತ್ರರಂಗ ಪ್ರವೇಶಿಸಿದ್ದ ದರ್ಶನ್ ಕುಮಾರ್ ಆಮೇಲೆ 'ಮೇರಿ ಕೋಮ್' ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ಕಂಡರೂ ಅದರಿಂದ ಅವರು ಬರಕತ್ತಾಗಿರಲಿಲ್ಲ. ಈಗ ಬಿಜೆಪಿ ಅಜೆಂಡಾದಂತೆ ಆಗಿರುವ 'ದಿ ಕಾಶ್ಮೀರ್ ಫೈಲ್ಸ್' ಚಿತ್ರದ ಅಭಿನಯ ಅವರನ್ನು ಮುನ್ನೆಲೆಗೆ ತಂದು ನಿಲ್ಲಿಸಿದೆ.

ದರ್ಶನ್ 2001ರಲ್ಲೇ ಮೊದಲ ಸಣ್ಣ ಪಾತ್ರದಲ್ಲಿ ನಟಿಸಿದರು. ಆಮೇಲೂ ಅವರಿಗೆ ಅವಕಾಶಗಳು ಸಿಗಲಿಲ್ಲ. ಆಡಿಷನ್ ಕೊಡುವುದು ಅನಿವಾರ್ಯವಾಗಿತ್ತು. ಆಗ ಅವರ ಬಳಿ ಹಣವಿರಲಿಲ್ಲ. ಮುಂಬೈನ ಅಂಧೇರಿಯಲ್ಲಿ ಒಂದು ಜೊತೆ ಫಾರ್ಮಲ್ ಷೂ ಅನ್ನು 200 ರೂಪಾಯಿ ಕೊಟ್ಟು ಖರೀದಿಸಿದ್ದರು. ಆಡಿಷನ್‌ಗೆ ಮಾತ್ರ ಅದನ್ನು ಹಾಕಿಕೊಂಡು ಹೋಗುತ್ತಿದ್ದರು. ಅದು ಬೇಗ ಕಿತ್ತುಹೋಗಬಾರದೆನ್ನುವುದು ಉದ್ದೇಶ.

ಹೀಗೇ ಕೆಲವು ಆಡಿಷನ್‌ಗಳಾದವು. ಒಮ್ಮೆ ರಾತ್ರಿ 10 ಗಂಟೆಯ ನಂತರ ಆಡಿಷನ್ ಮುಗಿಸಿ, ಹೊರಬಂದಾಗ ಷೂನ ಅಟ್ಟೆ ಕಿತ್ತುಬಂದಿತು. ಹತ್ತಿರದಲ್ಲಿ ರಿಪೇರಿ ಮಾಡುವವರು ಯಾರೂ ಇರಲಿಲ್ಲ. ಎರಡೂ ಷೂಗಳನ್ನು ಕೈಲಿ ಹಿಡಿದೇ ಆರೇಳು ಕಿ.ಮೀ. ನಡೆದು ಸಾಗಿದ್ದನ್ನು ದರ್ಶನ್ ಇತ್ತೀಚೆಗೆ ಸಂದರ್ಶನವೊಂದರಲ್ಲಿ ನೆನಪಿಸಿಕೊಂಡರು.

2014ರಲ್ಲಿ 'ಮೇರಿ ಕೋಮ್' ಚಿತ್ರದಲ್ಲಿ ಪ್ರಿಯಾಂಕಾ ನಿರ್ವಹಿಸಿದ್ದ ಪಾತ್ರದ ಪತಿಯಾಗಿ ಕಾಣಿಸಿಕೊಂಡ ಮೇಲೆ ದರ್ಶನ್‌ಗೆ ಕೆಲವು ಅವಕಾಶಗಳು ಸಿಕ್ಕವು. ಹಾಗೆಂದು ಹೆಚ್ಚು ಹಣ ಸಂಪಾದಿಸಲು ಅವರಿಗೆ ಆಗಲಿಲ್ಲ. ಜೀವನ ನಿರ್ವಹಣೆ ಹೇಗೋ ನಡೆಯುವಂತಾಯಿತಷ್ಟೆ.

ಹಿಂದೆ ಬಸ್ ಟಿಕೆಟ್ ಹಣ ಉಳಿಸಿ, ಪಾರ್ಲೆ–ಜಿ ಬಿಸ್ಕತ್ ಕೊಂಡು ಚಹಾದಲ್ಲಿ ಅದ್ದಿಕೊಂಡು ತಿಂದ ಕಷ್ಟದ ದಿನಗಳು ಈಗಲೂ ಅವರಿಗೆ ಕಣ್ಣಿಗೆ ಕಟ್ಟಿದ ಹಾಗಿದೆ. ■





ರಣಬೀರ್ ಕಪೂರ್, ಆಲಿಯಾ ಭಟ್, ಅಯಾನ್ ಮುಖರ್ಜಿ

# 'ಬ್ರಹ್ಮಾಸ್ತ್ರ'ಕ್ಕೆ ಕಾಶಿ ಸ್ಪರ್ಶ

ಆಲಿಯಾ ಭಟ್‌ಗೆ ಈ ವರ್ಷ ಜಾಕ್‌ಪಾಟ್ ಹೊಡೆಯುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. 'ಗಂಗೂಬಾಯಿ ಕಾಠಿಯಾವಾಡಿ' ಹಿಂದಿ ಸಿನಿಮಾದ ಅಭಿನಯಕ್ಕೆ ಎಲ್ಲರಿಂದ ಶ್ಲಾಘನೆ ಪಡೆದಿರುವ ಅವರು, ಮೊನ್ನೆಯಷ್ಟೆ 'ಬ್ರಹ್ಮಾಸ್ತ್ರ ಪಾರ್ಟ್ ಒನ್ ಶಿವ' ಹಿಂದಿ ಸಿನಿಮಾದ ಚಿತ್ರೀಕರಣ ಮುಗಿಸಿದರು. ಕಾಶಿ ಸುತ್ತಮುತ್ತಲಿನ ಘಾಟ ಪ್ರದೇಶಗಳಲ್ಲಿ ಕೊನೆಯ ಹಂತದ ಚಿತ್ರೀಕರಣ ಮುಗಿಸಿದ ಮೇಲೆ ದೊಡ್ಡ ದೋಣಿಯಲ್ಲಿ ಚಿತ್ರತಂಡದವರೊಟ್ಟಿಗೆ ಕುಳಿತು ಸಂತಸದ ಪ್ರಯಾಣ ಮಾಡಿದರು. ಮೆಚ್ಚಿದ ಹುಡುಗ ರಣಬೀರ್ ಕಪೂರ್ ಜತೆಯಲ್ಲಿ ಕಾಶಿ ಗಲ್ಲಿಗಳಲ್ಲಿ ತಿರುಗಾಡಿದರು. ಕಾಶಿ ವಿಶ್ವನಾಥನ ದೇವಸ್ಥಾನಕ್ಕೆ ಹೋಗಿ ಹಣೆಗೆ ದೊಡ್ಡ ಕುಂಕುಮ ಇಟ್ಟುಕೊಂಡ ಆಲಿಯಾ, ರಣಬೀರ್ ಹಾಗೂ ನಿರ್ದೇಶಕ ಅಯಾನ್ ಮುಖರ್ಜಿ ಕ್ಯಾಮೆರಾಗೆ ಪೋಸ್ ನೀಡಿದ್ದೂ ಸುದ್ದಿಯಾಯಿತು.

2018ರಲ್ಲಿ 'ಬ್ರಹ್ಮಾಸ್ತ್ರ' ಮೊದಲ ಭಾಗದ ಚಿತ್ರೀಕರಣ ಶುರುವಾಗಿತ್ತು. ರಣಬೀರ್ ಹಾಗೂ ಆಲಿಯಾ ಮೊದಲ ಬಾರಿಗೆ ಜೋಡಿಯಾಗಿರುವ ಈ ಚಿತ್ರದ ಮಾರ್ಕೆಟಿಂಗ್‌ಗೆ ಅವರಿಬ್ಬರ ನಡುವಿನ ಸಂಬಂಧವೇ ಅನುಕೂಲ ಕಲ್ಪಿಸಲಿದೆ ಎನ್ನುವುದು ನಿರ್ಮಾಪಕ ಕರಣ್ ಜೋಹರ್ ನಂಬಿಕೆ. ಅವರ ಧರ್ಮ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ₹300 ಕೋಟಿಗೂ ಹೆಚ್ಚು ಬಂಡವಾಳದಲ್ಲಿ ಈ ಸಿನಿಮಾ ತಯಾರಾಗಿದೆ ಎನ್ನುವ ಮಾತಿದೆ.

ಹೊಸಕಾಲದ ನಾಯಕ ಅತಿಮಾನುಷ ಶಕ್ತಿ ಪಡೆಯುವ ಸಲುವಾಗಿ ಮಹಾಭಾರತಕ್ಕೂ ಹಿಂದಿನ ಕಾಲವನ್ನು ಪ್ರವೇಶಿಸುವ ಫ್ಯಾಂಟಸಿ ಕಥನವನ್ನು 'ಬ್ರಹ್ಮಾಸ್ತ್ರ' ಒಳಗೊಂಡಿದೆ. 'ವೇಕ್ ಅಪ್ ಸಿದ್' ಹಿಂದಿ ಚಿತ್ರದ ಮೂಲಕ ನಿರ್ದೇಶಕರಾಗುವ ಅವಕಾಶವನ್ನು ಕರಣ್ ಜೋಹರ್ ಅವರೇ ಅಯಾನ್ ಮುಖರ್ಜಿಗೆ ಒದಗಿಸಿದ್ದರು. ಅವರ ನಿರ್ದೇಶನದ 'ಯೇ ಜವಾನಿ ಹೈ ದಿವಾನಿ' ಕೂಡ ಗಳಿಕೆಯಲ್ಲಿ ಸಂಚಲನ ಮೂಡಿಸಿತ್ತು.

ಆಲಿಯಾ ಭಟ್ ಅವರಿಗೆ ಈಗ ಇರುವ ವಿಸ್ತೃತ ಮಾರುಕಟ್ಟೆಯನ್ನೇ ನೆಚ್ಚಿಕೊಂಡು, ರಣಬೀರ್ ಪ್ರತಿಭೆಗೆ ಅದನ್ನೇ ಟ್ರಂಪ್‌ಕಾರ್ಡ್ ಮಾಡಿ ಈ ಚಿತ್ರವನ್ನು ಕರಣ್ ನಿರ್ಮಿಸಿದ್ದಾರೆ. ಅಂದುಕೊಂಡಂತೆಯೇ ಆದರೆ ಇದೇ ವರ್ಷ ಸೆಪ್ಟೆಂಬರ್‌ನಲ್ಲಿ ಚಿತ್ರವು ಬಿಡುಗಡೆಯಾಗಲಿದೆ.

ರಾಜಮೌಳಿ ನಿರ್ದೇಶನದ 'ಆರ್‌ಆರ್‌ಆರ್' ಚಿತ್ರದಲ್ಲಿ ಸಣ್ಣ ಪಾತ್ರವಿದ್ದರೂ ಆಲಿಯಾ ಅವರಿಗೆ ಅದು ಕೂಡ ಮುಖ್ಯವಾದ ಅವಕಾಶವೇ ಹೌದಾಗಿದೆ. ಈ ವರ್ಷ ಒಂದರ ನಂತರ ಒಂದು ಚಿತ್ರ ತೆರೆಕಾಣುತ್ತಿರುವುದು ಅವರಿಗೆ ಖುಷಿಯ ಸಂಗತಿ. ■